(ಇ) ಹಾಗಿದ್ದಲ್ಲಿ, ಹಂಪೆಯಲ್ಲಿ ಬೇಗನೆ ಸಾರ್ವಜನಿಕ ಆರೋಗ್ಯ ಘಟಕವನ್ನು ಸರಕಾರದವರು ಪ್ರಾರಂಭಿಸುವರೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಹೌದು.

(ಆ) ಹೌದು.

(ಇ) ಹಂಪೆಯಲ್ಲಿ ಒಂದು ಸರಕಾರಿ ಆಯುರ್ವೇದಿಕ್ ಆಸ್ಪತ್ರೆಯಿದೆ. ಮತ್ತು ಹಂಪೆಯಿಂದ ೭ ಕಿ.ಮೀ. ದೂರದಲ್ಲಿರುವ ಕಮಲಾಪುರದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಘಟಕವಿದೆ. ಆದುದರಿಂದ ಅತಿ ತುರ್ತಾಗಿ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲು ಸಾಧ್ಯವಾಗುವುದಿಲ್ಲ.

## ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಕ್ರೀಡಾ ಸಂಸ್ಥೆಗಳು

೧೪೪. ಶ್ರೀ ಪಿ. ರಾಮುಚೇವ್ (ಮಲ್ಲೇಶ್ವರಂ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ೧೯೮೧-೮೨ ಮತ್ತು ೧೯೮೩ ರಲ್ಲಿ ಅನುದಾನವನ್ನು ಕೇಳಿರುವ ಕ್ರೀಡಾ ಸಂಸ್ಥೆಗಳ ಹೆಸರುಗಳೇನು.

(ಆ) ಯಾವ ಯಾವ ಸಂಸ್ಥೆಗಳಿಗೆ ಎಂದು ಎಷ್ಟೆಷ್ಟು ಅನುದಾನವನ್ನು ನೀಡಲಾಗಿದೆ.

(ಇ) ಯಾವ ಯಾವ ಸಂಸ್ಥೆಗಳಿಗೆ ಅನುದಾನವನ್ನು ತಿರಸ್ಕರಿಸಲಾಗಿದೆ ಮತ್ತು ಹಾಗೆ ತಿರಸ್ಕರಿಸಲು ಕಾರಣವೇನು ;

(ಈ) ಕ್ರೀಡಾ ಸಂಸ್ಥೆಗಳ ಕೋರಿಕೆಯಂತೆ ಅನುದಾನ ಸಂಹಿತೆಯನ್ನು ಬದಲಾಯಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು.

ಶ್ರೀ ಜೀವರಾಜ ಆಳ್ವಾ (ಕನ್ನಡ ಮತ್ತು ಸಂಸ್ಕೃತಿ ಮತ್ತು ಯುವಜನ ರಾಜ್ಯ ಮಂತ್ರಿಗಳು).—

ಉತ್ತರ —(ಅ), (ಆ) ದಯವಿಟ್ಟು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂದ 'ಅ' ನ್ನು ನೋಡಿರಿ.

(ಇ) ಈಜು, ವಾಲೀಬಾಲ್, ಫುಟ್‌ಬಾಲ್ ಒಲಂಪಿಕ್ ಸ್ಪಾರ್ಕ್ ಸಂಸ್ಥೆಗಳಿಗೆ ಅನುದಾನವನ್ನು ತಿರಸ್ಕರಿಸಲಾಗಿದೆ. ಸಂದರಿ ಸಂಘಗಳು ಇಲಾಖೆ ಅನುದಾನ ಸಮಿತಿಯ ನಿಯಮಾವಳಿಗೆ ಅನುಗುಣವಾಗಿ ಸಮಂಜಸ ಮಾಹಿತಿಗಳನ್ನು ಒಪ್ಪಿಸದೇ ಇರುವುದರಿಂದ ತಿರಸ್ಕರಿಸಲಾಗಿದೆ.

(ಈ) ಸದರಿ ಅನುದಾನ ಸಂಹಿತೆಯನ್ನು ೧೯೮೨ ನೇ ಆಗಸ್ಟ್ ಮಾಹೆಯಲ್ಲಿ ಜಾರಿಗೆ ತರಲಾಯಿತು. ಸಂಹಿತೆಯನ್ನು ಬದಲಾಯಿಸಲು ಇಲಾಖೆಯು ಪರಿಶೀಲಿಸುತ್ತಿದೆ.

ಅನುಬಂಧ 'ಅ'

೧೯೮೧–೮೨, ೧೯೮೨–೮೩ನೇ ಸಾಲಿನಲ್ಲಿ ವಿವಿಧ ಸಂಘಗಳಿಗೆ ಮಂಜೂರು ಮಾಡಿದ ಹಣ

| ಕ್ರಮ ಸಂಖ್ಯೆ | ಸಂಘದ ಹೆಸರು | ಮಂಜೂರಾದ ಹಣ ೧೯೮೧–೮೨ ರೂ. ಪೈ. | ಮಂಜೂರಾದ ಹಣ ೧೯೮೨–೮೩ ರೂ. ಪೈ. |
|---|---|---|---|
| ೧ | ಹಿರಿಯರ ಅಥ್ಲೆಟಿಕ್ಸ್ | ೧೦,೦೦೦-೦೦ | ೬೦,೯೮೨-೦೦ |
| ೨ | ಜಿಮ್ನಾಸ್ಟಿಕ್ಸ್ | ೯,೩೦೯-೦೦ | ೭,೮೦೦-೦೦ |
| ೩ | ಕಬಡ್ಡಿ | ೧೬,೮೧೦-೦೦ | ೭,೭೦೦-೦೦ |
| ೪ | ಸಾಫ್ಟ್ ಬಾಲ್ | ೬,೦೦೦-೦೦ | ೩,೨೦೦-೦೦ |
| ೫ | ಬ್ಯಾಸ್ಕೆಟ್ ಬಾಲ್ | ೩೪,೮೩೪-೫೫ | ೫೧,೧೫೮-೦೦ |
| ೬ | ಮಹಿಳಾ ಕಾಲ್ಚೆಂಡು | ೧೫,೯೯-೦೦ | ೨೩,೦೬೩-೦೦ |
| ೭ | ಪರ್ವತಾರೋಹಣ ಮತ್ತು ಸ್ಪಾರ್ಕ್ | ೨೫,೦೨೦-೦೦ | ೨೫,೨೦೦-೦೦ |
| ೮ | ಹ್ಯಾಂಡ್‌ಬಾಲ್ | ೪೮,೪೨೦-೦೦ | ೧೯,೪೭೫-೦೮ |
| ೯ | ಕುಸ್ತಿ | ೧೫,೦೩೧-೦೦ | ೮,೮೯೩-೪೦ |
| ೧೦ | ಥ್ರೋಬಾಲ್ | ೧೩,೬೫೦-೦೦ | ೧೫,೨೮೫-೦೦ |
| ೧೧ | ಬಾಕ್ಸಿಂಗ್ | ೬,೫೮೮-೨೫ | ೭,೧೫೦-೦೦ |
| ೧೨ | ಸೈಕ್ಲಿಂಗ್ | ೩೮,೨೦೫-೨೦ | ೬,೬೦೦-೦೦ |
| ೧೩ | ಚದುರಂಗ | ೪೫,೪೯೩-೦೦ | ೨೦,೨೪೦-೦೦ |
| ೧೪ | ಯೋಗ | ೨,೦೦೦-೦೦ | ೧೧,೬೫೦-೦೦ |
| ೧೫ | ಖೋ ಖೋ | ೧೬,೫೩೩-೮೮ | ೮,೭೭೫-೦೦ |
| ೧೬ | ಬಿಲ್ಲುಬಾಣ | ೨೪ ೫೬೪-೭೫ | ೩೦,೩೧೬-೦೦ |
| ೧೭ | ಟೇಬಲ್ ಟೆನ್ನಿಸ್ | ೪,೧೯೪-೦೦ | ೮೯,೬೫೫-೦೦ |
| ೧೮ | ಪವರ್ ಲಿಫ್ಟಿಂಗ್ | ೫,೮೦೭-೦೦ | ೩೧,೬೧೯-೧೫ |
| ೧೯ | ವಾಲಿಬಾಲ್ | ೪೬,೯೨೦-೨೦ | ೫೪,೧೮೦-೦೦ |
| ೨೦ | ಜೂಡೂ | ೧೬,೪೦೨-೦೦ | ೧೬,೪೩೫-೦೦ |
| ೨೧ | ಅಥ್ಲೆಟಿಕ್ಸ್ | ೭೩,೦೭೮-೫೦ | ೪೧,೨೩೦-೦೦ |
| ೨೨ | ಕಿವುಡರ | ೬೪೪-೦೦ | ೫,೦೦೦-೦೦ |
| ೨೩ | ಬಾಡಿ ಬಿಲ್ಡರ್ಸ್ | ೨,೭೨೯-೦೦ | ೯,೩೮೪-೦೦ |
| ೨೪ | ವೈಟ್‌ಲಿಫ್ಟಿಂಗ್ | ೨೩,೮೧೩-೬೨ | ೮,೩೭೮-೦೦ |
| ೨೫ | ಬ್ಯಾಡ್‌ಮಿಂಟನ್ (ಶಟಲ್) | ೯,೯೯೭-೮೦ | ೧೬,೫೭೮-೭೫ |
| ೨೬ | ಒಲಂಪಿಕ್ | ೧,೨೮,೨೩೮-೦೦ | ೨,೨೩೮-೦೦ |
| ೨೭ | ಮಹಿಳಾ ಕ್ರಿಕೇಟ್ | ೧೦,೯೦೦-೦೦ | ೮,೨೩೮-೦೦ |
| ೨೮ | ಕೇರಂ | ೧೪,೬೭೨-೦೦ | ೭,೨೮೦-೦೦ |
| ೨೯ | ಕರಾಟೆ | ೩,೦೯೦-೦೦ | ೧೦,೨೧೬-೦೦ |
| ೩೦ | ಬಾಲ್ ಬ್ಯಾಡ್‌ಮಿಂಟನ್ | ೧೧,೫೧೯-೦೦ | ೮,೯೨೫-೦೦ |
| ೩೧ | ಮಹಿಳಾ ಹಾಕಿ | ೧೬,೬೧೫-೦೦ | — |
| ೩೨ | ಹಾಕಿ (ಪುರುಷರು) | ೨,೪೦೦-೦೦ | — |
| ೩೩ | ಕುರುಡರು | ೨,೪೦೦-೦೦ | — |
| ೩೪ | ಲಾನ್ ಟೆನ್ನಿಸ್ | — | ೨,೦೦೦-೦೦ |
| ೩೫ | ಟೆನ್ನಿಕಾಯಿಟ್ | — | ೩,೬೮೦-೦೦ |
| ೩೬ | ಟ್ರಿಡ್ಜ್ | ೪,೦೦೦-೦೦ | — |

ಮೇಲ್ಕಂಡ ಮೊಬಲನ್ನು ಇಲಾಖೆಯು ಮಾನ್ಯತೆ ಪಡೆದ ಕಂಪನಿಗಳಿಗೆ ಈ ಕೆಳಕಂಡ ಉದ್ದೇಶಗಳಿಗಾಗಿ ೧೯೮೧-೮೨, ೧೯೮೨-೮೩ನೇ ಸಾಲಿನಲ್ಲಿ ಕೊಡಲಾಗಿದೆ.

೧. ರಾಜ್ಯದ ಕ್ರೀಡಾ ಪಟುಗಳು ಮಿನಿ, ಕಿರಿಯ ಮತ್ತು ಹಿರಿಯ ರಾಷ್ಟ್ರೀಯ ಚಾಂಪಿಯನ್‌ಷಿಪ್, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು;

೨. ಕ್ರೀಡಾ ಕೂಟಕ್ಕೆ ಮುನ್ನ ಪೂರ್ವ ತರಬೇತಿಗಾಗಿ,

೩. ರಾಷ್ಟ್ರೀಯ ದಕ್ಷಿಣ ವಲಯ ಮತ್ತು ರಾಜ್ಯ ಮಟ್ಟದ ಚಾಂಪಿಯನ್‌ಷಿಪ್ ನಡೆಸಲು.

## ಸರ್ಕಾರಿ ನೌಕರರ ಮೇಲೆ ಇರುವ ದೂರುಗಳು.

೧೪೨. ಶ್ರೀ ಬಿ. ಜಿ. ಬಣಕಾರ್, (ಹಿರೇಕೆರೂರು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜಿಲ್ಲಾವಾರು ಆಯಾ ಜಿಲ್ಲೆಗಳಲ್ಲಿ ವಿವಿಧ ಇಲಾಖಾ ವಿಚಾರಣಾಧಿಕಾರಿಗಳ ಮುಂದೆ ೩೧-೩-೮೩ಕ್ಕೆ ಇದ್ದ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಆ) ೧೯೮೨-೮೩ನೇ ಸಾಲಿನಲ್ಲಿ ವಿಚಾರಣೆ ಮಾಡಿ ಮುಗಿಸಿದ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಇ) ೧೯೮೨-೮೩ನೇ ಸಾಲಿನಲ್ಲಿ ವಿಚಾರಣೆ ಮಾಡಿ ಎಷ್ಟು ಜನ ನೌಕರರು ತಪ್ಪಿತಸ್ಥರೆಂದು ಎಷ್ಟು ಜನ ತಪ್ಪಿತಸ್ಥರಲ್ಲವೆಂದು ನಿರ್ಣಯಿಸಲಾಗಿದೆ (ಜಿಲ್ಲಾವಾರು ಮಾಹಿತಿ ಒದಗಿಸಬೇಕಾಗಿ ವಿನಂತಿ),

ಈ) ೧೯೮೨-೮೩ನೇ ಸಾಲಿನಲ್ಲಿ ಜಿಲ್ಲಾವಾರು ಎಷ್ಟು ಜನ ಅಧಿಕಾರಿಗಳ ಹಾಗೂ ನೌಕರರ ವಿರುದ್ಧ ಸಾರ್ವಜನಿಕರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ, (ಮುಖ್ಯ ಮಂತ್ರಿಯವರು.)

ಉತ್ತರ

ಅ) ಸಚಿವಾಲಯದ ಒಟ್ಟು ಒಂಬತ್ತು ಇಲಾಖೆಗಳ ಆಡಳಿತ ನಿಯಂತ್ರಣಕ್ಕೆ ಒಳಪಟ್ಟ ಇಲಾಖೆಗಳಲ್ಲಿ ಇದ್ದ ಮೊಕದ್ದಮೆಗಳ ಸಂಖ್ಯೆ ೮೬೬. ಇವುಗಳ ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ. ಇದರಲ್ಲಿ ವ್ಯವಸಾಯ ಹಾಗು ಪಶುಸಂಗೋಪನಾ, ವಾಣಿಜ್ಯ ಹಾಗು ಕೈಗಾರಿಕೆ, ವಿದ್ಯಾ, ಆಹಾರ ಹಾಗು ಅರಣ್ಯ, ಒಳಾಡಳಿತ, ಲೋಕೋಪಯೋಗಿ ಹಾಗು ವಿದ್ಯುಚ್ಛಕ್ತಿ, ಕಂದಾಯ, ಸಮಾಜ ಕಲ್ಯಾಣ ಹಾಗು ಕಾರ್ಮಿಕ ಮತ್ತು ವಾರ್ತಾ ಪ್ರಸಾರೋದ್ಯಮ ಹಾಗು ಯುವಜನ ಸೇವಾ ಇಲಾಖೆಗಳ ಆಡಳಿತ ನಿಯಂತ್ರಣಕ್ಕೆ ಒಳಪಟ್ಟ ಇಲಾಖೆಗಳಲ್ಲಿ ಇರುವ ಮೊಕದ್ದಮೆಗಳ ಸಂಖ್ಯೆ ಸೇರಲಿಲ್ಲ.

ಆ) ೨೪೩—ಮೇಲೆ ಸೂಚಿಸಿದ ಒಂಬತ್ತು ಇಲಾಖೆಗಳಲ್ಲಿ.

ಇ) ತಪ್ಪಿತಸ್ಥರು—೧೧೩.

ತಪ್ಪಿತಸ್ಥರಲ್ಲದವರು — ೧೪೫.

ಜಿಲ್ಲಾವಾರು ವಿವರ ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ.

ಈ) ಮಾಹಿತಿಯನ್ನು ಸಂಗ್ರಹಿಸಿ ಒದಗಿಸಲಾಗುವುದು.

## ಉಪ ವಾಕ್ಯ 'ಅ' ಮತ್ತು 'ಇ' ಗೆ ಸಂಬಂಧಪಟ್ಟ ವಿವರಣ ಪಟ್ಟಿ.

ಸಿಬ್ಬಂದಿ ಹಾಗು ಆಡಳಿತ ಸುಧಾರಣೆ, ಯೋಜನಾ, ಆರೋಗ್ಯ ಹಾಗು ಕುಟುಂಬ ಕಲ್ಯಾಣ, ಆರ್ಥಿಕ, ಒಳಾಡಳಿತ, ವಸತಿ ಹಾಗು ನಗರಾಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ ಹಾಗು ಸಹಕಾರ